ಕಲಿಯುವ ಕಲೆ...

# ಸುಂದರಬನ ೨



ಚಿತ್ರದ ಅವರೆಕಾಯಿ ಹೂವು - ಫ್ರೀ ಫೋಟೋ

**ಶಿಕ್ಷಕರು/ಮಕ್ಕಳು/ಪಾಲಕರಲ್ಲಿ ನಿವೇದನೆ:**
'ಸುಂದರಬನ'ದಲ್ಲಿ ಖುಷಿ ಕಲಿಕಾ ಅನುಭವ ಪಡೆಯಲು ಆಯಾ ಪುಟಗಳಲ್ಲಿ ಕೊಟ್ಟಿರುವ 'ನಮ್ಮ ಆಶಯ'ವನ್ನು ಮೊದಲು ಗಮನಿಸಿ. ಆ ಪ್ರಕಾರ ಚಟುವಟಿಕೆಗಳನ್ನು ಮಾಡಿರಿ/ಮಾಡಿಸಿರಿ.

ವಿದ್ಯಾರ್ಥಿ/ ವಿದ್ಯಾರ್ಥಿನಿಯ ಹೆಸರು :.......................................


ಶಾಲೆಯ ಹೆಸರು :..............................................................

ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ
Dhwani Educational Resource Centre

'ಧ್ವನಿ' ಶೈಕ್ಷಣಿಕ ಯೋಜನೆಗಳ ವ್ಯಾಪ್ತಿಯಲ್ಲಿ ಉಚಿತ ಹಂಚಿಕೆಗಾಗಿ
ಜನವರಿ – ಫೆಬ್ರವರಿ – ಮಾರ್ಚ್ ೨೦೨೫

ಆರಂಭ ಯೋಜನೆ
Arambha 2024-25 Project
is Supported by Many
Individual Donors

# ಕಥೆ ಕಟ್ಟೋಣ ಬನ್ನಿ





ಮಿಶ್ರ ಕಲಿಕೆಗಾಗಿ

**ನಮ್ಮ ಆಶಯ :**
ಮಕ್ಕಳು ಮೇಲಿನ ಚಿತ್ರಗಳನ್ನು ಗಮನಿಸಲಿ. ತಮ್ಮದೇ ಆದ ರೀತಿಯಲ್ಲಿ ಕಥೆ ಕಟ್ಟಿ ಹೇಳಲು ಪ್ರಯತ್ನಿಸಲಿ. ನಂತರ ತಾವು ನೋಡಿರುವ ಪಕ್ಷಿಗಳ ಕುರಿತು ಮಾತನಾಡಲಿ. ಅನಂತರ ಕೊಟ್ಟಿರುವ ಗೆರೆಗಳ ಮೇಲೆ ಕಥೆಯನ್ನು ಬರೆಯಲು ಪ್ರಯತ್ನಿಸಲಿ.

**ಭಾಷಾ ಚೌಕ**

**ಪಕ್ಷಿ – Bird** (ಬರ್ಡ್)
**ಕಾಳು – Grain** (ಗ್ರೇಯ್ನ್)
**ಗುಂಪು – Group** (ಗ್ರೂಪ್)

# ಜಾಲದಾಟ



ಖುಷಿ ಕಲಿಕೆಗಾಗಿ


**ನಮ್ಮ ಆಶಯ:**

ಮೇಲಿನ ಜಾಲದಲ್ಲಿ, ಮಂಗ ಅನಾನಸ್(ಫೈನಾಪಲ್) ಹಣ್ಣುಗಳನ್ನು ತಿನ್ನಲು ಹೋಗಬೇಕಾಗಿದೆ ಅದಕ್ಕೆ ದಾರಿ ತಿಳಿಯುತ್ತಿಲ್ಲ. ಮಕ್ಕಳು ಅದಕ್ಕೆ ಸರಿಯಾದ ದಾರಿ ತೋರಿಸಿ, ಸಹಾಯ ಮಾಡಲಿ. ನಂತರ ಖಾಲಿ ಜಾಗದಲ್ಲಿ ತಮಗಿಷ್ಟವಾದ ಪ್ರಾಣಿಯ ಚಿತ್ರ ಬರೆದು, ಎರಡೂ ಚಿತ್ರಗಳಿಗೂ ಬಣ್ಣ ಹಚ್ಚಲಿ.


**ಭಾಷಾ ಚೌಕ**

**ಹಣ್ಣು – Fruit** (ಫ್ರೂಟ್)
**ಮಂಗ/ಕೋತಿ – Monkey** (ಮಂಕಿ)
**ಆಲೋಚಿಸು – Think** (ತಿಂಕ್)

# ಹುಡುಕುವಾಟ



ಮಿಚಿ ಕಲಿಕೆಗಾಗಿ





**ನಮ್ಮ ಆಶಯ:**

ಕೆಳಗಿನ ಆಯತದಲ್ಲಿರುವ ತರಕಾರಿಗಳು ಮೇಲಿನ ಚಿತ್ರದಲ್ಲಿ ಅಡಗಿವೆ. ಅವುಗಳಿಗೆ, ಮಕ್ಕಳು ಸೂಕ್ತವಾದ ಬಣ್ಣ ಹಚ್ಚಿ ಗುರುತಿಸಲಿ. ನಂತರ ಚಿತ್ರಕ್ಕೆ ಬಣ್ಣ ಹಚ್ಚಿ, ಅದರ ಕುರಿತು ಮಾತನಾಡಲಿ.

**ಭಾಷಾ ಚೌಕ**

**ತರಕಾರಿ – Vegetable** (ವೆಜಿಟಬಲ್)



## ಬಂದು ನೋಡ್ರಿ ಬೇಕಾದ್ರೆ


ನಮ್ಮನೆ ಬೆಕ್ಕಿಗೆ ಕೋಡುಗಳಿಲ್ಲ
ಎದುರು ಬಂದರೆ ಹಾಯುವುದಿಲ್ಲ
ಬಂದು ನೋಡ್ರಿ ಬೇಕಾದ್ರೆ.......

ಅಜ್ಜನು ಹಲ್ಸೆಟ್ ಹಾಕದೆ ಇದ್ರೆ
ಮಂದಿಯ ಮುಂದೆ ನಗುವುದೇ ಇಲ್ಲ
ಬಂದು ನೋಡ್ರಿ ಬೇಕಾದ್ರೆ.......




ಅಜ್ಜಿಯ ತಲೆಯಲಿ ಕಪ್ಪನೆ ಕೂದಲು
ಎಷ್ಟು ಹುಡುಕಿದರು ಸಿಗುವುದೆ ಇಲ್ಲ
ಬಂದು ನೋಡ್ರಿ ಬೇಕಾದ್ರೆ.......

ಎಷ್ಟು ತೀಡಿದರು ನಮ್ಮಯ ನಾಯಿಯ
ಬಾಲವು ನೆಟ್ಟಗೆ ಆಗುವುದಿಲ್ಲ
ಬಂದು ನೋಡ್ರಿ ಬೇಕಾದ್ರೆ.......



ಮಿಶ್ರ ಕಲಿಕೆಗಾಗಿ







## ಪುಟ್ಟನ ಕಾಣಿಕೆ

ಅಜ್ಜಾ ಅಜ್ಜಾ ಏಳಜ್ಜ
ಬೋಳು ತಲೆಯ ನನ್ನಜ್ಜ
ನಿನ್ನಯ ಹುಟ್ಟಿದ ಹಬ್ಬಕ್ಕೆ
ತಂದಿರುವೆನು ನಾ ಬಾಚಣಿಕೆ

ಅಜ್ಜಿ ಅಜ್ಜಿ ಬಾರಜ್ಜಿ
ಬೊಚ್ಚು ಬಾಯಿಯ ನನ್ನಜ್ಜಿ
ಪೇಸ್ಟನು ಹಚ್ಚಿ ಹಲ್ಲುಜ್ಜು
ತಂದಿರುವೆನು ನಾ ಟೂತ್ ಬ್ರಷ್ಷು

**ಲೇಖಕರು: ಜಂಬುನಾಥ ಕಂಚ್ಯಾಣಿ**
**ಆಕರ: ಸುಮ್ ಸುಮ್ನೆ ನಗ್ತಿದೆ ಪಾಪು ಮಕ್ಕಳಿಗಾಗಿ ಕವಿತೆಗಳು**
**ಪ್ರಕಾಶನ: ಮಾನ್ಯತಾ ಪ್ರಕಾಶನ, ವಿಜಯಪುರ**
**ಮೊ.ನಂ: 9901111734**

**ನಮ್ಮ ಆಶಯ:**
ಶ್ರೀ ಜಂಬುನಾಥ ಕಂಚ್ಯಾಣಿ ಅವರು ಬರೆದಿರುವ 'ಬಂದು ನೋಡಿ ಬೇಕಾದ್ರೆ.. ಮತ್ತು ಪುಟ್ಟನ ಕಾಣಿಕೆ' ಕವನಗಳನ್ನು ಕೊಡಲಾಗಿದೆ. ಮಕ್ಕಳು, ಹಾಡಿ ಕುಣಿದು ಆನಂದಿಸಲಿ. ನಂತರ ಚಿತ್ರಗಳಿಗೆ ಬಣ್ಣ ಹಚ್ಚಲಿ.

# ಬಣ್ಣದಾಟ



ಸಾಂದರ್ಭಿಕ ಕಲಿಕೆಗೆ


**ನಮ್ಮ ಆಶಯ:**

ಮಕ್ಕಳು ಕೊಟ್ಟಿರುವ ಚಿತ್ರಕ್ಕೆ ಬಣ್ಣ ಹಚ್ಚಲಿ. ನಂತರ ಗಣರಾಜ್ಯೋತ್ಸವವನ್ನು ಶಾಲೆಯಲ್ಲಿ ಆಚರಿಸಿದರ ಕುರಿತು ಮಾತನಾಡಲಿ. ಖಾಲಿ ಇರುವ ಜಾಗದಲ್ಲಿ ಬಾವುಟದ ಚಿತ್ರ ಬರೆದು, ಬಣ್ಣ ಹಚ್ಚಲಿ.

**ಭಾಷಾ ಚೌಕ**

**ಬಾವುಟ – Flag** (ಫ್ಲ್ಯಾಗ್)


# ಹುಡುಕುವಾಟ



**ನಮ್ಮ ಆಶಯ:**

ಮಕ್ಕಳು ಮೇಲಿನ ಚಿತ್ರವನ್ನು ಗಮನಿಸಲಿ. ಚಿತ್ರದಲ್ಲಿ ಅಡಗಿರುವ ಇಂಗ್ಲೀಷ್ ಅಕ್ಷರಗಳನ್ನು ಗುರುತಿಸಿ, ಅವುಗಳಿಗೆ ತಿಳಿಹಸಿರು ಬಣ್ಣ ಹಚ್ಚಲಿ. ನಂತರ ಬೇರೊಂದು ಹಾಳೆಯಲ್ಲಿ ಇಂಗ್ಲೀಷ್ ಅಕ್ಷರಗಳಿಂದ ಸರಳ ಪದಗಳನ್ನು ಬರೆಯಲು ಪ್ರಯತ್ನಿಸಲಿ.

# ಸಂಖ್ಯಾಬಣ್ಣದಾಟ




**ಸೂಚನಾ ಪಟ್ಟಿ**


5. ಕೆಂಪು ಬಣ್ಣ
6. ಹಸಿರು ಬಣ್ಣ
7. ಕಂದು ಬಣ್ಣ
8. ನೀಲಿ ಬಣ್ಣ
9. ಕೇಸರಿ ಬಣ್ಣ
10. ಹಳದಿ ಬಣ್ಣ
11. ಬೂದು ಬಣ್ಣ
12. ಗುಲಾಬಿ ಬಣ್ಣ

ಮುಕ್ತ ಕಲಿಕೆಗಾಗಿ

**ನಮ್ಮ ಆಶಯ:**
ಮಕ್ಕಳು ಚಿತ್ರವನ್ನು ಗಮನಿಸಲಿ. ಅಲ್ಲಿರುವ ಲೆಕ್ಕಗಳನ್ನು ಮಾಡಿ, ಬಂದ ಉತ್ತರಕ್ಕೆ ಸೂಚನಾ ಪಟ್ಟಿಯನ್ನು ಅನುಸರಿಸಿ, ಬಣ್ಣ ಹಚ್ಚಲಿ. ನಂತರ ತಾವು ಬೆಳೆಸಿದ, ಗಿಡ/ಸಸ್ಯಗಳ/ಹೂವಿನ ಹೆಸರುಗಳನ್ನು ಕೊಟ್ಟಿರುವ ಗೆರೆಯ ಮೇಲೆ ಬರೆಯಲಿ.

**ಭಾಷಾ ಚೌಕ**

- ಹೂವು – **Flower** (ಫ್ಲೌವರ್)
- ದಳ/ಎಸಳು – **Petal** (ಪೆಟಲ್)
- ಎಲೆ – **Leaf** (ಲೀಫ್)
- ನೀರು – **Water** (ವಾಟರ್)
- ಬಣ್ಣ – **Colour** (ಕಲರ್)



ಮುತ್ತು ಕಲಿಕೆಗಾಗಿ

## ಬೆದರು ಬೊಂಬೆ

ಹೊಲದಲಿ ಅಲುಗಾಡದೇ
ಹಗಲಿರುಳು ನಿಲ್ಲುವುದು
ಬೆಳೆದು ನಿಂತ ಪೈರನು
ನಿಂತಲ್ಲೇ ಕಾಯುವುದು

ಕೆಲಸ ಮಾಡುವುದು
ಬಿಸಿಲು, ಮಳೆ
ಚಳಿಯನು ಲೆಕ್ಕಿಸದೇ
ನಯಾ ಪೈಸೆ
ಕೂಲಿ ಇಲ್ಲದೇ!

ಪ್ರಾಣಿ, ಪಕ್ಷಿಗಳು
ಇದನು ನೋಡಿ
ಹೆದರುವವು
ರೈತನಿಗೆ ಸಹಕಾರಿಯಾಗಿ
ನಿಲ್ಲುವವು

ನಿನ್ನಿಂದ ಪಡೆಯುವೆವು
ಬಹಳ ಬಹಳ ಲಾಭ
ನೀನು ಪ್ರಯೋಜನಕಾರಿ
ನೀನು ಮಹಾಉಪಕಾರಿ


**– ಶ್ರೀ ಈರಣ್ಣ ಬೆಂಗಾಲಿ**
**ಆಕರ: ಪಟ ಪಟ ಗಾಳಿಪಟ ಮಕ್ಕಳ ಕವಿತೆಗಳು**
**ಪ್ರಕಾಶನ: ಕೃಷ್ಣಾರುಣ ಪ್ರಕಾಶನ, ರಾಯಚೂರು**
**ಮೊ.ನಂ: 9986724198**

**ಭಾಷಾ ಚೌಕ**

**ಹೊಲ/ಜಮೀನು – Field** (ಫೀಲ್ಡ್)
**ಮೋಡ – Cloud** (ಕ್ಲೌಡ್)
**ಸೂರ್ಯ – Sun** (ಸನ್)
**ಬೆದರುಗೊಂಬೆ – Scarecrow** (ಸ್ಕೇಅಕ್ರೋ)

**ನಮ್ಮ ಆಶಯ:**
ಮಕ್ಕಳು ಮೇಲೆ ಕೊಟ್ಟಿರುವ ಚಿತ್ರವನ್ನು ಗಮನಿಸಿ, ಬಣ್ಣ ಹಚ್ಚಲಿ. ನಂತರ ಕೊಟ್ಟಿರುವ ಪದ್ಯವನ್ನು ಕಲಿತು ಹಾಡಲಿ. ಪದ್ಯದಲ್ಲಿ ಬರುವ ಒತ್ತಕ್ಷರ ಪದಗಳನ್ನು ಗುರುತಿಸಿ, ಕೊಟ್ಟಿರುವ ಗೆರೆಯ ಮೇಲೆ ಬರೆದು ಮತ್ತೊಮ್ಮೆ ಓದಲಿ.

# ಕಲಾ ಕ್ಷೇತ್ರ...





ಆರೋಗ್ಯ ಮತ್ತು ಪರಿಸರ: 'ಸಾರಿಗೆ' ಪಾಠಕ್ಕೆ ಪೂರಕ

**ನಮ್ಮ ಆಶಯ:**
ಚುಕ್ಕಿಯಿಂದ ಕೂಡಿರುವ ಚಿತ್ರವನ್ನು ಮಕ್ಕಳು ತಿದ್ದಿ, ಬಣ್ಣ ಹಚ್ಚಲಿ. ನಂತರ ತಾವು ನೋಡಿರುವ ವಾಹನಗಳ ಕುರಿತು ಮಾತನಾಡಲಿ. ಅನಂತರ ಕೊಟ್ಟಿರುವ ಖಾಲಿ ಜಾಗದಲ್ಲಿ ತಮಗಿಷ್ಟವಾದ ವಾಹನದ ಚಿತ್ರ ಬರೆದು ಬಣ್ಣ ಹಚ್ಚಲಿ.

**ಭಾಷಾ ಚೌಕ**

**ಬುಲ್ಡೋಜರ್ – Bulldozer** (ಬುಲ್ಡೋಜರ್)
**ಗಾಲಿ/ಚಕ್ರ – Wheel** (ವೀಲ್)

# ಕಣ್ಣುರುಕು


ಮತ್ತೆ ಕಲಿಕೆಗಾಗಿ

**ನಮ್ಮ ಆಶಯ:**
ಮೇಲಿನ ಎರಡೂ ಚಿತ್ರಗಳು ನೋಡುವುದಕ್ಕೆ ಒಂದೇ ತರಹ ಇದ್ದರೂ ಅವುಗಳಲ್ಲಿ ಆರಕ್ಕಿಂತಲೂ ಹೆಚ್ಚು ವ್ಯತ್ಯಾಸಗಳಿವೆ. ಮಕ್ಕಳು ಅವುಗಳನ್ನು ಗುರುತಿಸಿ, ಬಣ್ಣ ಹಚ್ಚಲಿ. ನಂತರ ಚಿತ್ರದ ಕುರಿತು, ಅವರ ಮಾತುಗಳನ್ನು ಕೊಟ್ಟಿರುವ ಗೆರೆಯ ಮೇಲೆ ಬರೆಯಲಿ.

**ಭಾಷಾ ಚೌಕ**

**ಕಾಡು/ವನ – Forest** (ಫಾರೆಸ್ಟ್)
**ಬಾವಲಿ – Bat** (ಬ್ಯಾಟ್)
**ಹಾರಾಟ – Flying** (ಫ್ಲೈಯಿಂಗ್)
**ಜೋಕಾಲಿ/ಉಯ್ಯಾಲೆ – Swing** (ಸ್ವಿಂಗ್)

# ಚುಕ್ಕಿಯಾಟ





**ನಮ್ಮ ಆಶಯ:**
ಮಕ್ಕಳು ಚುಕ್ಕಿಚಿತ್ರದಲ್ಲಿ 1ರಿಂದ 62ರವರೆಗಿನ ಸಂಖ್ಯೆಗಳನ್ನು ಕ್ರಮವಾಗಿ ಸೇರಿಸಲಿ. ಚಿತ್ರಕ್ಕೆ ಬಣ್ಣ ಹಚ್ಚಲಿ. ಮೂಡುವ ಚಿತ್ರದ ಕುರಿತು ಮಾತನಾಡಲಿ.

**ಭಾಷಾ ಚೌಕ**

ಚುಕ್ಕೆ – Dot (ಡಾಟ್)
ಸಂಖ್ಯೆ/ಅಂಕಿ – Number (ನಂಬರ್)


# ಮಂಡಲಕಲೆ



ಖುಷಿ ಕಲಿಕೆಗಾಗಿ

**ನಮ್ಮ ಆಶಯ:**
ಮಕ್ಕಳು ಮೊದಲು ಚಿತ್ರವನ್ನು ಗಮನವಿಟ್ಟು ನೋಡಲಿ. ನಂತರ ತಮಗಿಷ್ಟವಾದ ಬಣ್ಣಗಳನ್ನು ತೆಗೆದುಕೊಂಡು ಪ್ರತಿಯೊಂದು ಭಾಗಕ್ಕೂ ಪ್ರತ್ಯೇಕವಾಗಿ ಹಚ್ಚುತ್ತಾ ಹೋಗಲಿ. ಈ ಚಟುವಟಿಕೆಯನ್ನು ಒಂದೇ ಸಲಕ್ಕೆ ಮುಗಿಸಬೇಕೆನ್ನುವ ಒತ್ತಾಯವಿಲ್ಲ. ತಮ್ಮ ಬಿಡುವಿನ ವೇಳೆಯಲ್ಲಿಯೂ ಸ್ವಲ್ಪ ಸ್ವಲ್ಪ ಮಾಡಬಹುದು. ಆದರೆ ಇದನ್ನು ಮಾಡುವಾಗ ಆದಷ್ಟು ಇದನ್ನೇ ಗಮನಿಸಲಿ.

# ನೆರಳಿನಾಟ



ಮುಕ್ತ ಕಲಿಕೆಗಾಗಿ

**ನಮ್ಮ ಆಶಯ:**
ಮಕ್ಕಳು ಕೊಟ್ಟಿರುವ ಚಿತ್ರವನ್ನು ಗಮನಿಸಲಿ. ಕೆಲವು ಪ್ರಾಣಿಗಳು ಇವೆ. ಅವುಗಳ ನೆರಳುಗಳು ಬಿದ್ದಿವೆ. ಆಯಾ ಪ್ರಾಣಿಗಳ ವೃತ್ತದಲ್ಲಿ ಅವುಗಳ ನೆರಳುಗಳನ್ನು ಎಣಿಸಿ, ಬರೆಯಲಿ. ತಾವು ನೋಡಿರುವ ಪ್ರಾಣಿಗಳನ್ನು ಕೊಟ್ಟಿರುವ ಗೆರೆಯ ಮೇಲೆ ಬರೆಯಲಿ.

**ಭಾಷಾ ಚೌಕ**

ಅಳಿಲು – **Squirrel** (ಸ್ಕ್ವಿರಲ್)
ನರಿ – **Fox** (ಫಾಕ್ಸ್)
ಕೊಕ್ಕರೆ – **Crane** (ಕ್ರೇನ್)
ಹೇಸರಗತ್ತೆ – **Zebra** (ಜೀಬ್ರ)



ಸಾಂದರ್ಭಿಕ ಚಿತ್ರ

**ನಮ್ಮ ಆಶಯ:**

ಮಕ್ಕಳು ಚಿತ್ರಕ್ಕೆ ಬಣ್ಣ ಹಚ್ಚಲಿ. ನಂತರ ಯುಗಾದಿ ಹಬ್ಬದಂದು ತಮ್ಮ ಮನೆಯಲ್ಲಿ ಮಾಡುವ ತಿಂಡಿಗಳ ಚಿತ್ರ ಬರೆದು ಬಣ್ಣ ಹಚ್ಚಲಿ.

| ಭಾಷಾ ಚೌಕ |
|---|
| ಮಾವು – **Mango** (ಮ್ಯಾಂಗೋ) |
| ಬೇವು – **Neem** (ನೀಮ್) |
| ಬೆಲ್ಲ – **Jaggery** (ಜಾಗರಿ) |

# ಒತ್ತಕ್ಷರದಾಟ



## ಪುಟ್ಟಿ

ನನ್ನ ತಂಗಿ ಪುಟ್ಟಿ
ಕೈಯ ತಟ್ಟಿ ತಟ್ಟಿ
ನೆಲವ ಕುಟ್ಟಿ ಕುಟ್ಟಿ
ತಿಂದಳು ಒಂದು ರೊಟ್ಟಿ!



## ದಪ್ಪ

ದಗಡಿ ದಗಡಿ ದಪ್ಪ
ಅವರೆಕಾಯಿ ತುಪ್ಪ
ತಿಂದೋರ ಹೊಟ್ಟೆ ದಪ್ಪ

ಭಾಷಾ ಕಲಿಕೆಗಾಗಿ

ಉದಾ: ನನ್ನ



## ಮಲ್ಲು

ಮಲ್ಲು
ಮೆಲ್ಲಮೆಲ್ಲನೆ
ಉಜ್ಜು
ನಿನ್ನಯ ಹಲ್ಲು





## ಗುಬ್ಬಿ


ಗುಬ್ಬಿ ಗುಬ್ಬಿ
ಚಿಂವ್ ಚಿಂವ್ ಗುಬ್ಬಿ
ಬಾ ಕೊಡತೀನಿ
ಚಟ್ನಿ ರುಬ್ಬಿ

– ಶಿಹೊಂ, ಧ್ವನಿ ಬಳಗ
ಆಕರ: ಕನ್ನಡ ಕಲಿಕಾ ಮಾದರಿಗಳು

**ನಮ್ಮ ಆಶಯ:**
ಮಕ್ಕಳು ಕೊಟ್ಟಿರುವ ಪ್ರಾಸಪದ್ಯವನ್ನು ಕಲಿತು ಹಾಡಲಿ. ಪ್ರಾಸಪದ್ಯದಲ್ಲಿ ಬಂದಿರುವ ಒತ್ತಕ್ಷರಪದಗಳಿಗೆ ದುಂಡುಸುತ್ತಿ ಗುರುತಿಸಲಿ. ಅನಂತರ ಒತ್ತಕ್ಷರ ಇರುವ ಪದಗಳನ್ನು ಕೊಟ್ಟಿರುವ ಖಾನೆಯಲ್ಲಿ ಬರೆಯಲಿ. ಉದಾಹರಣೆಯನ್ನು ಗಮನಿಸಲಿ. ಚಿತ್ರಗಳಿಗೆ ಬಣ್ಣ ಹಚ್ಚಲಿ.

# ಕರಕುಶಲ – ಕಾರ್


1. ಮೊದಲು ಕಾರ್‌ಗೆ ಕ್ರೆಯಾನ್/ಬಣ್ಣದ ಪೆನ್ಸಿಲ್‌ನಿಂದ ನಿನಗಿಷ್ಟವಾದ ಬಣ್ಣ ಹಚ್ಚು.
2. ಕಾರ್ ಇರುವ ಹಾಳೆಯನ್ನು ಕತ್ತರಿಯ ಸಹಾಯದಿಂದ ಬೇರ್ಪಡಿಸು.
3. ಈಗ ಕಾರ್ ಸುತ್ತಲೂ ಇರುವ ದಪ್ಪ ಗೆರೆಯ ಮೇಲೆ ಕತ್ತರಿಸಿಕೊ.
4. ಕಾರ್ ಚಿತ್ರದಲ್ಲಿ ಚುಕ್ಕಿಗಳಿರುವ ಜಾಗದಲ್ಲಿ ಸರಿಯಾಗಿ, ನಿಧಾನವಾಗಿ ಮಡಚು.
5. ಚಿತ್ರದ ಅಂಚಿನಲ್ಲಿ 'ಅಂಟಿಸು' ಬರೆದಿರುವ ಜಾಗದಲ್ಲಿ ಅಂಟಿನಿಂದ ಸರಿಯಾಗಿ ಅಂಟಿಸು.
6. ಈಗ ನಿನ್ನ ಕೈಯಲ್ಲಿ ಒಂದು ಆಟಿಕೆ ಕಾರ್ ಸಿದ್ಧ. ಈ ನಿನ್ನ ಕಾರಿಗೆ ಒಂದು ಹೆಸರು ಕೊಡು.




ಆರೋಗ್ಯ ಮತ್ತು ಪರಿಸರ: 'ಸಾರಿಗೆ' ಪಾಠಕ್ಕೆ ಪೂರಕ

# ಬಣ್ಣದಾಟ

ಸಾಂದರ್ಭಿಕ ಕಲಿಕೆಗಾಗಿ



**ನಮ್ಮ ಆಶಯ:**
ಮಕ್ಕಳು ಚಿತ್ರವನ್ನು ಗುರುತಿಸಿ ಬಣ್ಣ ಹಚ್ಚಲಿ. ನಂತರ ಅವರ ಮನೆ/ಪಕ್ಕದ ಮನೆಗಳಲ್ಲಿ ಶಿವರಾತ್ರಿ ಹಬ್ಬವನ್ನು ಆಚರಿಸುವ ಕುರಿತು ಮಾತನಾಡಲಿ.

# ಎಣಿಕೆಯಾಟ

ಮುಕ್ತ ಕಲಿಕೆಗಾಗಿ



**ನಮ್ಮ ಆಶಯ:**
ಮಕ್ಕಳು ಚಿತ್ರದಲ್ಲಿ ಎಷ್ಟು ಬೆಕ್ಕುಗಳಿವೆ ಎಂಬುದನ್ನು ಎಣಿಕೆಮಾಡಿ ಕೊಟ್ಟಿರುವ ಗೆರೆಯ ಮೇಲೆ ಬರೆಯಲಿ. ನಂತರ ಚಿತ್ರಕ್ಕೆ ಬಣ್ಣ ಹಚ್ಚಲಿ. ಚಿತ್ರದಲ್ಲಿರುವ ಸನ್ನಿವೇಶದ ಕುರಿತು ಶಿಕ್ಷಕರೊಂದಿಗೆ ಮಾತನಾಡಲಿ.

______________

# ಚಿತ್ರಕಥಾಪಟ

## (ಆಧಾರಿತ ಚಟುವಟಿಕೆ)




1. ನಿನ್ನ ಹತ್ತಿರ ಜಾಮಿಟ್ರಿ ಬಾಕ್ಸ್ ಇದೆಯಾ?

2. ಕಥೆಯಲ್ಲಿ, ಎಲ್ಲವೂ ಜಗಳವಾಡುವ ಹಾಗೇ ನಿನ್ನ ಹತ್ತಿರ ಇರುವ ಪೆನ್ನು, ರಬ್ಬರ್ ಇತ್ಯಾದಿಗಳು ಜಗಳ ಮಾಡಿಕೊಂಡಿವೆಯೆ?

3. ಕಥೆಯಲ್ಲಿ, ಎಲ್ಲಾ ವಸ್ತುಗಳು ಜಗಳವಾಡಿದ್ದು ಸರಿನಾ?

4. ನಿನ್ನ ಜಾಮಿಟ್ರಿ ಬಾಕ್ಸ್‌ನಲ್ಲಿ ಯಾವ ಯಾವ ವಸ್ತುಗಳಿವೆ?

5. ಈ ಚಿತ್ರಕಥಾಪಟದಲ್ಲಿಯ ನಿನಗಿಷ್ಟವಾದ ಒಂದು ಚಿತ್ರವನ್ನು ಬರೆಯಲು ಪ್ರಯತ್ನಿಸು.



**ನಮ್ಮ ಆಶಯ:**
ಈ ಚಟುವಟಿಕೆ ನಡೆಸುವ ಮುಂಚೆ ಅಥವಾ ನಡೆಯುವಾಗ ಸಂಬಂಧಿತ 'ಯಾರು ಹೆಚ್ಚು' ಚಿತ್ರಪಟವನ್ನು ಮಕ್ಕಳು ಮತ್ತೊಂದು ಸಲ ನೋಡಲಿ. ಕಥೆಯನ್ನು ಮನನ ಮಾಡಿಕೊಳ್ಳಲಿ. ಅನಂತರ, ಶಿಕ್ಷಕರು ಮತ್ತು ಮಕ್ಕಳ ನಡುವೆ ಮಾತುಕತೆ ನಡೆಯಲಿ. ಮಾತುಕತೆಗೆ ಪ್ರೇರಣೆಯಾಗಿ ಮಾತ್ರ ಇಲ್ಲಿ ಪ್ರಶ್ನೆಗಳು ಇವೆ.

# ಬಣ್ಣದಾಟ




**ನಮ್ಮ ಆಶಯ:**
ಮಕ್ಕಳು ಮೇಲಿನ ಸನ್ನಿವೇಶವನ್ನು ಗಮನಿಸಿ, ಬಣ್ಣ ಹಚ್ಚಲಿ. ರಂಜಾನ್ ಹಬ್ಬವನ್ನು ನಿಮ್ಮ ಮನೆ/ಊರು/ಸ್ನೇಹಿತರ ಮನೆಗಳಲ್ಲಿ ಹೇಗೆ ಆಚರಣೆ ಮಾಡುತ್ತಾರೆ ಎಂಬುದರ ಕುರಿತು ತರಗತಿಯಲ್ಲಿ ಮಾತನಾಡಲಿ. ಖಾಲಿ ಇರುವ ಜಾಗದಲ್ಲಿ ಇದೇ ಹಬ್ಬಕ್ಕೆ ಸಂಬಧಿಸಿದ ತಮಗಿಷ್ಟವಾದ ಚಿತ್ರ ಬರೆಯಲಿ.

**ಭಾಷಾ ಚೌಕ**

ಮಸೀದಿ – **Mosque** (ಮಾಸ್ಕ್)
ಹಬ್ಬ – **Festival** (ಫೆಸ್ಟಿವೆಲ್)



# ಕವನ ಚಿತ್ರಪಟ
## (ಆಧಾರಿತ ಚಟುವಟಿಕೆ)




1. ನಿನಗೆ ಯಾವ ಆಟ ಅಂದ್ರೆ ಇಷ್ಟ ಮತ್ತು ಏಕೆ?

2. ಕವನ ಚಿತ್ರಪಟದಲ್ಲಿ ಯಾರು ಯಾರು ಸೇರಿ ಆಟವಾಡಿದರು?


3. ಕೊನೆಗೆ ಆಟದಲ್ಲಿ ಗೆದ್ದವರು ಯಾರು?

4. ನಿನಗೂ ಕ್ರಿಕೆಟ್ ಅಂದರೆ ಇಷ್ಟನಾ?



**ನಮ್ಮ ಆಶಯ:**
ಈ ಚಟುವಟಿಕೆ ನಡೆಸುವ ಮುಂಚೆ ಅಥವಾ ನಡೆಯುವಾಗ ಸಂಬಂಧಿತ 'ಕಾಡಿನಲ್ಲಿ ಕ್ರಿಕೆಟ್' ಕವನ ಚಿತ್ರಪಟವನ್ನು ಮಕ್ಕಳು ಮತ್ತೊಂದು ಸಲ ನೋಡಲಿ. ಕವನವನ್ನು ಮನನ ಮಾಡಿಕೊಳ್ಳಲಿ. ಅನಂತರ, ಶಿಕ್ಷಕರು ಮತ್ತು ಮಕ್ಕಳ ನಡುವೆ ಮಾತುಕತೆ ನಡೆಯಲಿ. ಮಾತುಕತೆಗೆ ಪ್ರೇರಣೆಯಾಗಿ ಮಾತ್ರ ಇಲ್ಲಿ ಪ್ರಶ್ನೆಗಳು ಇವೆ.

# ಬಣ್ಣದಾಟ





**ನಮ್ಮ ಆಶಯ:**
ಮಕ್ಕಳು ಮೇಲಿನ ಚಿತ್ರಕ್ಕೆ ಬಣ್ಣ ಹಚ್ಚಲಿ. ನಂತರ ತಮ್ಮ ಊರುಗಳಲ್ಲಿ ಹೋಳಿ ಹಬ್ಬದ ಆಚರಣೆಯ ಕುರಿತು ಮಾತನಾಡಲಿ.

| ಭಾಷಾ ಚೌಕ |
| --- |
| ಬಣ್ಣ – **Colour** (ಕಲರ್) |
| ಎರಚು – **Splash** (ಸ್ಪ್ಲಾಷ್) |
| ಪಿಚಕಾರಿ – **Squirt** (ಸ್ಕ್ವರ್ಟ್) |

# ಬಣ್ಣದಾಟ



**ನಮ್ಮ ಆಶಯ:**
ಮಕ್ಕಳು ಶಾಲೆಯಲ್ಲಿ ಡಾ. ಬಿ. ಆರ್. ಅಂಬೇಡ್ಕರ್ ಅವರ ಜಯಂತಿಯನ್ನು ಆಚರಿಸಿದರ ಕುರಿತು ಮಾತನಾಡಲಿ. ನಂತರ ಅವರ ಸಾಧನೆಯ ಕುರಿತು ಶಿಕ್ಷಕರಿಂದ ತಿಳಿದುಕೊಳ್ಳಲಿ. ಖಾಲಿ ಜಾಗದಲ್ಲಿ ಅವರ ಭಾವಚಿತ್ರ ಬರೆದು ಬಣ್ಣ ಹಚ್ಚಲಿ.

# ಕಣ್ಣರಳಿಸಿ ನೋಡು





ಮತಿ ಕಲಿಕೆಗಾಗಿ



# ನೋಡು – ಮಾಡು



ಮುಕ್ತ ಕಲಿಕೆಗಾಗಿ

**ನಮ್ಮ ಆಶಯ:**
ಮಕ್ಕಳು ಚಿತ್ರವನ್ನು ಗಮನಿಸಲಿ. ನಂತರ ಹಣ್ಣುಗಳನ್ನು ಬಳಸಿಕೊಂಡು ವಿವಿಧ ಆಕರಗಳನ್ನು ರಚಿಸಲು ಪ್ರಯತ್ನಿಸಲಿ.



ಇಲ್ಲಿನ ಕೆಲವು ಚಿತ್ರಗಳನ್ನು ವಿವಿಧ ಅಂತರ್ಜಾಲ ತಾಣಗಳಿಂದ ಕೃತಜ್ಞತಾಪೂರ್ವಕವಾಗಿ ತೆಗೆದುಕೊಂಡು ಅಗತ್ಯಕ್ಕೆ ತಕ್ಕಂತೆ ಅಳವಡಿಸಿಕೊಳ್ಳಲಾಗಿದೆ.

**ನಮ್ಮ ಆಶಯ:**
೨ನೇ ತರಗತಿಯ ಮಕ್ಕಳಿಗಾಗಿಯೇ ವಿಶೇಷವಾಗಿ ರೂಪಿಸಲಾದ 'ಸುಂದರಬನ'ದಲ್ಲಿನ ಚಟುವಟಿಕೆ – ಆಟ ಇತ್ಯಾದಿಗಳೆಲ್ಲ ಸಾಧ್ಯವಾದಷ್ಟು ಮಟ್ಟಿಗೆ ಕನ್ನಡ – ಪರಿಸರ ಅಧ್ಯಯನ – ಗಣಿತ ವಿಷಯಗಳಿಗೆ ಪೂರಕವಾಗಿ ರೂಪುಗೊಂಡಿವೆ ಎಂಬುದನ್ನು ತಾವು ಗಮನಿಸಬೇಕು.

ಸಂಪರ್ಕ ಮಾಹಿತಿ:
ಧ್ವನಿ
ಶೈಕ್ಷಣಿಕ ಸಂಪನ್ಮೂಲ ಕೇಂದ್ರ
# ೭೬, 'ಪುಷ್ಪಾಂಜಲಿ'
೩ನೇ ಅಡ್ಡರಸ್ತೆ, ಶಿವಗಿರಿ
ಧಾರವಾಡ – ೫೮೦ ೦೦೭
ಮೊ: ೯೮ ೬೬೬ ೧೦೫೫
dhwanitrust@gmail.com
www.dhwanitrust.org

ಗಮನಿಸಿ : ಈ ಶೈಕ್ಷಣಿಕ ಸಂಪನ್ಮೂಲವನ್ನು ಕೇವಲ ಶೈಕ್ಷಣಿಕ ಉದ್ದೇಶಕ್ಕಾಗಿ ರೂಪಿಸಲಾಗಿದೆ. ಇದನ್ನು ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರದ ಪೂರ್ವಾನುಮತಿಯಿಲ್ಲದೇ ವಾಣಿಜ್ಯ ಉದ್ದೇಶಗಳಿಗಾಗಿ ಪುನರ್ಮುದ್ರಿಸುವುದಾಗಲೀ, ಬಳಸಿಕೊಳ್ಳುವುದಾಗಲೀ ನಿಷಿದ್ಧ. ಶೈಕ್ಷಣಿಕ ಉದ್ದೇಶದಿಂದ ಶಿಕ್ಷಕರು, ಪಾಲಕರು, ಸಂಪನ್ಮೂಲವ್ಯಕ್ತಿಗಳು ಇದನ್ನು ಉಪಯೋಗಿಸುವುದಾದರೆ ಧ್ವನಿ ಶೈ.ಸಂ.ಕೇಂದ್ರದ ಗಮನಕ್ಕೆ ತರವುದು ಅಪೇಕ್ಷಣೀಯ.